**ಎಂ.ವಿ.ಸಿ.445/2024,      ಪಿ.ಡಬ್ಲೂ-1          ಹೆಸರುಃ ರತ್ನಮ್ಮ**

**ದಿಃ29-04-2026 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀ ಎಸ್.ವಿ. ವಕೀಲರಿಂದಃ**

ನಾನು ವಿದ್ಯಾಬ್ಯಾಸ ಮಾಡಿಲ್ಲ.  ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ನನ್ನ ಪತಿ ಮೃತಪಟ್ಟಿರುತ್ತಾರೆ.  ನನಗೆ 4 ಜನ ಹೆಣ್ಣು ಮಕ್ಕಳು ಮತ್ತು ಓರ್ವ ಮಗ ಇದ್ದಾನೆ. ಈ ಪ್ರಕರಣದ ಅಪಘಾತದಲ್ಲಿ ಮೃತಪಟ್ಟಿರುವ ಮೃತ ಜ್ಯೋತಿ ನನ್ನ 2 ನೇ ಮಗಳು. ನಾನು, ನನ್ನ ಮಗ ಒಟ್ಟಿಗೆ ಇದ್ದು, ನನ್ನ ಹೆಣ್ಣು ಮಕ್ಕಳು ಅವರ ವೈವಾಹಿಕ ಕುಟುಂಬದಲ್ಲಿ ಇದ್ದಾರೆ. ನನ್ನ ಮೃತ ಮಗಳಾದ ಜ್ಯೋತಿರವರನ್ನು ಹೆಚ್.ಡಿ.ಪುರಕ್ಕೆ ಕೊಟ್ಟು ವಿವಾಹ ಮಾಡಿದ್ದೆವು.  ಮೃತ ಮಗಳಾದ ಜ್ಯೋತಿಯ ಪತಿಯ ಹೆಸರು ಮಂಜುನಾಥ ಆಗಿದ್ದು, 2 ನೇ ಅರ್ಜಿದಾರರಾಗಿರುತ್ತಾರೆ.  ನನ್ನ ಮೃತ ಮಗಳಿಗೆ 3 ಮತ್ತು 4 ನೇ ಅರ್ಜಿದಾರರು ಮಕ್ಕಳಾಗಿರುತ್ತಾರೆ ಎಂದರೆ ಸರಿ.  ನನ್ನ ಮಗಳು ಆಕೆಯ ಪತಿಯೊಂದಿಗೆ ಹೆಚ್.ಡಿ.ಪುರ ಗ್ರಾಮದಲ್ಲಿ ಇದ್ದರು.  ನನ್ನ ಮಗಳನ್ನು ವಿವಾಹ ಮಾಡಿಕೊಟ್ಟಿದ್ದು, ಹಾಗಾಗಿ ನನಗೂ ಹಾಗೂ ನನ್ನ ಮೃತ ಮಗಳಿಗೂ ರಕ್ತ ಸಂಭಂಧ ಹೊರತುಪಡಿಸಿ ಇತರೆ ಸಂಬಂಧ ಇಲ್ಲ ಎಂದರೆ ಸರಿ. ಹಾಗಾಗಿ ನನ್ನ ಮಗಳ ಮರಣದ ಕುರಿತು ಅರ್ಜಿಯನ್ನು ಸಲ್ಲಿಸಲು ನನಗೆ ಹಕ್ಕು ಇಲ್ಲ ಎಂದರೆ 3 ಮತ್ತು 4 ನೇ ಅರ್ಜಿದಾರರು ನಾನು ಸಾಕಿರುವ ಕಾರಣ ಈ ಅರ್ಜಿಯನ್ನು ಹಾಕಿದ್ದೇನೆ ಎಂದು ಹೇಳುತ್ತಾರೆ.

2. 3 ಮತ್ತು 4 ನೇ ಅರ್ಜಿದಾರರು ನನ್ನ ಮಗಳು ಮತ್ತು ಅಳಿಯನೇ ನೋಡಿಕೊಂಡಿದ್ದರೂ ಸಹ, ಈ ಅರ್ಜಿಯನ್ನು ಸಲ್ಲಿಸುವ ಸಲುವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೃತ ಮಗಳು 2 ನೇ ಅರ್ಜಿದಾರನೊಂದಿಗೆ ಇದ್ದರು ಎಂದರೆ ಸಾಕ್ಷಿ ಇದ್ದರು, ಆದರೆ 2 ನೇ ಅರ್ಜಿದಾರರು ನೋಡಿಕೊಳ್ಳುತ್ತಿರಲಿಲ್ಲ ಎಂದು ಹೇಳುತ್ತಾರೆ. ನನ್ನ ಮೃತ ಮಗಳಾದ ಜ್ಯೋತಿ ಕೂಲಿ ಕೆಲಸ ಮಾಡುತ್ತಿದ್ದಳು.  ನನ್ನ ಮೃತ ಮಗಳು ತರಕಾರಿ ವ್ಯಾಪಾರ ಮಾಡುತ್ತಿದ್ದ ಕುರಿತು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿ. ನನ್ನ ಮೃತ ಮಗಳನ್ನು ನಮ್ಮ ಮನೆಯಲ್ಲಿ ಇಟ್ಟುಕೊಂಡು ಯಾವತ್ತೂ ಸಹ ನೋಡಿಕೊಂಡಿಲ್ಲ ಎಂದರೆ ಸರಿಯಲ್ಲ.

3. ನಾನು ಅಪಘಾತವನ್ನು ನೋಡಿಲ್ಲ ಎಂದರೆ ಸರಿ. ನನ್ನ ಮೃತ ಮಗಳು ನನ್ನ ಮಗನಾದ ತಿಪ್ಪೇಸ್ವಾಮಿಯೊಂದಿಗೆ ಬೈಕಿನಲ್ಲಿ ಹೋಗುತ್ತಿದ್ದಾಗ ಅಪಘಾತ ಆಗಿತ್ತು.  ನನ್ನ ಮಗಳು ಹೊಸದುರ್ಗದಿಂದ ಶ್ರೀರಾಂಪುರಕ್ಕೆ ಹೋಗುತ್ತಿದ್ದಾಗ ಅಪಘಾತ ಆಗಿರುತ್ತದೆ.  ನನ್ನ ಮಗಳು ಬೈಕಿನ ಹಿಂಬದಿಯಲ್ಲಿ ಕುಳಿತು ಹೋಗುತ್ತಿದ್ದಳು.  ಬೈಕಿನಲ್ಲಿ ಹೋಗುವಾಗ ನನ್ನ

ಮಗ ಮತ್ತು ನನ್ನ ಮಗಳು ಹೆಲ್ಮೆಟ್‌ನ್ನು ಧರಿಸಿದ್ದ ಬಗ್ಗೆ ನಾನು ನೋಡಿಲ್ಲ. ಬೈಕಿನ ಸವಾರರು ಕಾನೂನಿನ ಪ್ರಕಾರ ಹೆಲ್ಮೆಟ್‌ನ್ನು ಧರಿಸಬೇಕು ಎಂದರೆ ಸರಿ. ನನ್ನ ಮಗ ಮತ್ತು ನನ್ನ ಮೃತ ಮಗಳು ಹೆಲ್ಮೆಟ್‌ನ್ನು ಧರಿಸದೆ ಪ್ರಯಾಣಿಸಿ ಕಾನೂನನ್ನು ಉಲ್ಲಂಘಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

4. ಅಪಘಾತದ ಸಮಯದಲ್ಲಿ ನನ್ನ ಮಗ ಚಾಲನೆ ಮಾಡುತ್ತಿದ್ದ ಬೈಕು ನಮ್ಮ ಸಂಬಂಧಿಕರಿಗೆ ಸೇರಿದ್ದು, ಅವರ ಹೆಸರು ಗೊತ್ತಿಲ್ಲ. ಸದರಿ ಬೈಕು ಶಿರಪನಹಳ್ಳಿ ಗ್ರಾಮದ ನವೀನರಿಗೆ ಸಂಬಂಧಿಸಿದ್ದು. ಅಪಘಾತದ ಸಮಯದಲ್ಲಿ ಸದರಿ ಮೋಟಾರ್ ಸೈಕಲ್‌ನ ಹಿಂಬದಿ ಸವಾರರಿಗೆ ಸಂಬಂಧಿಸಿದಂತೆ ವಿಮಾ ಪಾಲಿಸಿ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಹಿಂಬದಿ ಸವಾರರಿಗೆ ವಿಮೆ ಇಲ್ಲದ ಕಾರಣ 2ನೇ ಎದುರುದಾರರು ಯಾವುದೇ ಪರಿಹಾರವನ್ನು ಪಾವತಿಸಲು ಬಾದ್ಯಸ್ಥರಲ್ಲ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ.

5. ಅಪಘಾತದ ರಾತ್ರಿಯೇ ನನ್ನ ಮಗಳು ಚಿತ್ರದುರ್ಗದ ಬಸವೇಶ್ವರ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾಳೆ. ಅಪಘಾತದ ಕುರಿತು ನನ್ನ ಮಗನಾದ ತಿಪ್ಪೇಸ್ವಾಮಿ ದೂರನ್ನು ನೀಡಿರುತ್ತಾರೆ. ಸದರಿ ಅಪಘಾತದ ಕುರಿತು ಮಾರುತಿ ತಂದೆ ಕೃಷ್ಣಪ್ಪರವರು 30.11.2023 ರಂದು ದೂರನ್ನು ನೀಡಿರುತ್ತಾರೆ ಎಂದರೆ ಸರಿ. ಅಪಘಾತದ ಸಮಯದಲ್ಲಿ ನವೀನ ರವರು ಬೈಕನ್ನು ಚಾಲನೆ ಮಾಡುತ್ತಿದ್ದು, ಆದರೆ ಆತನಿಗೆ ಚಾಲನಾ ಪರವಾನಗಿ ಇಲ್ಲದ ಕಾರಣ ನನ್ನ ಮಗ ಚಾಲನೆ ಮಾಡುತ್ತಿದ್ದನು ಎಂದು ಸುಳ್ಳು ನಮೂದಿಸಿ ಒಂದು ದಿನ ವಿಳಂಬವಾಗಿ ದೂರನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಾಗಿ ಪೊಲೀಸರೊಂದಿಗೆ ಷರೀಕಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಈ ಪ್ರಕರಣವನ್ನು ದಾಖಲಿಸಲು ನನಗೆ ಅಧಿಕಾರ ಇಲ್ಲದಿದ್ದಾಗ್ಯೂ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ನನ್ನ ಮೃತ ಮಗಳಾದ ಜ್ಯೋತಿಗೆ ಎಷ್ಟು ವರ್ಷ ಆಗಿತ್ತು ಎಂದು ನನಗೆ ಗೊತ್ತಿಲ್ಲ. ಅಪಘಾತದ ಸಮಯದಲ್ಲಿ ನನ್ನ ಮೃತ ಮಗಳಾದ ಜ್ಯೋತಿ ಗೆ 47 ವರ್ಷ ವಯಸ್ಸಾಗಿತ್ತು ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ